ಆಡಳಿತ ಮಂಡಳಿ ಸಭೆ 30-06-2009 ರಂದು ಚರ್ಚಿಸಿ ಪರಿವರ್ತನಾ ದರವನ್ನು ಮತ್ತೆ ಹೆಚ್ಚಿಸಲು ಅನುಮೋದಿಸಲಾಗಿದೆ.

ಊ) ಅಗ್ಗ ದರದ ಸೀರೆ ಪಂಚೆ ಯೋಜನೆಯಡಿಯಲ್ಲಿ ಸರ್ಕಾರಕ್ಕೆ ರೂ.2.00 ಕೋಟಿಯಿಂದ ರೂ. 25.00 ಕೋಟಿಗಳ ಅನುದಾನ ಹಂಚಿಕೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ ಹಾಗೂ ವಿದ್ಯಾ ವಿಕಾಸ ಯೋಜನೆಯಡಿ ಶಿಕ್ಷಣ ಇಲಾಖೆಯಿಂದ ಶಾಲಾ ಸಮವಸ್ತ್ರ ಪೂರೈಕೆಗಾಗಿ ನಿಗಮಕ್ಕೆ ಆದೇಶ ಬಂದಿರುವುದು. ಇದರಿಂದ ಕೈಮಗ್ಗ ನೇಕಾರರಿಗೆ ನಿರಂತರ ಉದ್ಯೋಗ ಹಾಗೂ ಪರಿವರ್ತನಾ ದರವನ್ನು ಪಾವತಿಸಲು ಅನುಕೂಲವಾಗುವುದು. ಇದಲ್ಲದೇ ಜವಳಿ ಅಭಿವೃದ್ಧಿ ಇಲಾಖೆಯ ನೇಕಾರ ಕಲ್ಯಾಣ ಯೋಜನೆಗಳನ್ನು ಕೂಡ ಕ.ಕೈ.ಅ.ನಿಂದ ನೇಕಾರರಿಗೆ ವಿಸ್ತರಿಸಲಾಗುತ್ತಿದೆ.

915 ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳವಾಡ ಏತ ನೀರಾವರಿ ಯೋಜನೆಯ ಮೊದಲನೇ ಹಂತದ ಕಾಲುವೆ ಜಮಖಂಡಿ ಕ್ಷೇತ್ರದ ಯಾವ ಭಾಗದಲ್ಲಿ ಮುಕ್ತಾಯವಾಗುತ್ತಿದೆ;

ಆ) ಈ ರೀತಿ ಮುಕ್ತಾಯವಾದ ಕಾಲುವೆಯಿಂದ ತೊದಲಬಾಗಿ ಹಾಗೂ ನಾಗನೂರು ಗ್ರಾಮದ ಎಷ್ಟು ಎಕರೆ ಜಮೀನು ಜವಳು ಭೂಮಿಯಾಗಿದೆ;

ಇ) ಸದರಿ ಕಾಲುವೆಯನ್ನು ತೊದಲಬಾಗಿ ಕೆರೆಗೆ ಸೇರಿಸುವ ಕುರಿತು ಸರ್ಕಾರದ ನಿಲುವೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಮುಳವಾಡ ಏತ ನೀರಾವರಿ ಯೋಜನೆಯ ಮೊದಲನೇ ಹಂತದ ಪಶ್ಚಿಮ ಕಾಲುವೆಯು ಜಮಖಂಡಿ ಮತ ಕ್ಷೇತ್ರದ ತೊದಲಬಾಗಿ ಗ್ರಾಮದ ಹತ್ತಿರ ಇರುವ ಕಾರಿ ಹಳ್ಳಕ್ಕೆ ಸೇರಿಸಲಾಗಿದೆ.

ಆ) ತೊದಲಬಾಗಿ ಅಥವಾ ನಾಗನೂರ ಗ್ರಾಮದ ಯಾವುದೇ ಜಮೀನುಗಳು ಜವಳುಗೊಂಡಿರುವುದು ಕಂಡು ಬಂದಿರುವುದಿಲ್ಲ.

ಇ) ಬಿಜಾಪುರ ಜಿಲ್ಲೆಯ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಡಿ ತೊದಲಬಾಗಿ ಕೆರೆಯನ್ನು ತುಂಬಿಸಲು ಉದ್ದೇಶಿಸಲಾಗಿದೆ.